Regd No. M 1299 ॥ सत्यान्नास्ति परो धर्मः ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ಪ್ರತಿ ಬುಧವಾರ ಪ್ರಕಟಿಸಲ್ಪಡುವುದು ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಸಂಪುಟ 19] ಮೈಸೂರು, ಬುಧವಾರ 4 ನೆ ಮಾರ್ಚಿ 1936 [ಸಂಚಿಕೆ 25

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಂದ ಬರುವ ಟೂತ್‌ಪೆಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಯವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತಕ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಪರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ್ಣ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಆಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು:
ಮಿ| ಜಿ. ಎಸ್. ವೆಂಕಟರಾವ್

ಏಜೆನ್ಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

THE QUILON BANK

Established 1919

(Incorporated in Travancore,)

Head Office—QUILON

Member -- Reserve Bank of India

FIXED DEPOSITS

are now accepted by the Bank on the following terms :—

6 months	..	3½ per cent
12 months	..	4½ per cent
24 months	..	5 per cent

For particulars please apply to the Head Office, or Branches at :

Alleppey	Hyderabad (Dn)	Royapettah
Alwaye	Jaffna	Sherthallai
Bangalore C. & M. Stn	Kayamkulam	Secunderabad
Bangalore City	Kottayam	Tenkasi
Chirayinkil	Madras	Tinnevelly Jn.
Cochin	Madura	Tinnevely Town
Coimbatore	Mount Road	Trichinopoly
Coonoor	Mysore	Trivandrum
Erode	Nagarcoil	Tuiticorin
Ernakulam	Quilon	Vellore

Harijans honoured as holy guests

AT SRADH CEREMONY

A stir has been created in orthodox circles of Secunderabad by a striking gesture of sympathy towards Harjans made by Mr. Baji Krishna Rao, a prominent social reformer.

On the occasion of "Shradh" ceremony, when Brahmins are usually invited as honoured guests for "Brahmanartha", Mr. Krishna Rao invited wo Harijan boys instead, clothed and fed them and gave all the usual presents. Mr. Krishna Rao's wife who is generally known as "Harijan Matha," joined in the ceremony.

ಗುಲಿಸ್ತಾನ್

(ಕಾಪಿರೈಟ್)

ರಾಜನೀತಿ

ಒಬ್ಬ ಮಂತ್ರಿಯು ಕೆಲಸದಿಂದ ತೆಗೆದುಹಾಕಲ್ಪಡಲು ಅತನು ಸಾಧುಗಳ ಗುಂಪನ್ನು ಸೇರಿದನು. ಆ ಸತ್ಸಹವಾಸವು ಅವನ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿ ಮನಶ್ಶಾಂತಿಯನ್ನು ತಂದಿತು. ಕೆಲ ಕಾಲಾನಂತರ ಮರಿಗೆ ಈತನ ಮೇಲೆ ಆದರ ಉಂಟಾಗಿ ಪುನಃ ಅಮಾತ್ಯಪದವಿಯನ್ನು ಸ್ವೀಕರಿಸಬೇಕೆಂದು ಕೇಳಿದನು. ನಿವೃತ್ತ ಮಂತ್ರಿಯು ಅದಕ್ಕೆ ಸಮ್ಮತಿಸದೆ, "ಏನೇ ಕಿಗಳಿಗೆ ಅಧಿಕಾರದಲ್ಲಿರುವುದಕ್ಕಿಂತಲೂ ಅಪರ್ಣರಾಗಿರುವುದೇ ಯುಕ್ತವು—ಸಗರಿತ್ಯಾಗಿಗಳು ನಾಯಿಯ ಹಲ್ಲನ್ನು ಪೆಂಡಮಾಡಿರುವರು ಮತ್ತು ಮಾನವರ ಬಾಯನ್ನು ಮುಚ್ಚಿರುವರು; ಅವರು ತಮ್ಮ ಲೇಖನಗಳನ್ನು ನಾಶಮಾಡಿ ಲೇಖಣಿಗಳನ್ನು ಮುರಿದು ಹಾಕಿರುವುದಾಂದ ಏನು ಶರ್ಕರ ಖಂಡನೆಯ ಹೊಡೆತದಿಂದಲೂ ವಿತ್ತಾಪಹಾರದಿಂದಲೂ ತಪ್ಪಿಸಿಕೊಂಡಿರುವರು" ಎಂದು ಉತ್ತರವಿತ್ತನು. ಅದಕ್ಕೆ ರಾಜನು "ಹೇಗಾದರೂ, ರಾಜ್ಯದ ವಿಷಯಗಳನ್ನು ನೋಡಿಕೊಳ್ಳಲು ಏಕೈಕಯೂ, ಶಕ್ತನೂ ಆದ ಒಬ್ಬ ಮಂತ್ರಿಯು ನನಗೆ ಬೇಕಾಗಿದೆ" ಎಂದು ಹೇಳಿದನು. ಆಗ ಭೂತಪೂರ್ವ ಮಂತ್ರಿಯು, "ಜ್ಞಾನಿಯೂ ಮತ್ತು ಯೋಗ್ಯನೂ ಆದವನಿಗೆ ಅಂಥಹ ಕೆಲಸಗಳಲ್ಲಿ ಕೈಹಾಕಬಾರದೆಂಬುದೆ ನೂಲ ಮಂತ್ರವಾಗಿರುವುದು. ಪಕ್ಷಿವರ್ಗದಲ್ಲಿ ಘಿಂಕ್ಸ್ ಅಥವಾ ಹೊನಾಯ್ ಪಕ್ಷಿಯು ಇತರ ಜೀವಜಾತುಗಳನ್ನು ಹಿಂಸಿಸಿ ಕೇವಲ ಮೂಳೆಯನ್ನೇ ತಿಂದು ಜೀವಿಸುತ್ತದೆಯಾದುದರಿಂದ ಹೆಚ್ಚು, ಗೌರವಿಸಲ್ಪಡುತ್ತಿರುವುದು" ಎಂದು ಹೇಳಿದನು.

ಇದಕ್ಕೆ ಉದಾಹರಣೆ—ಸಿಂಹಗಳ ಪಾಲಕನನ್ನು 'ಸಿಂಹದ ಸೇವೆಯನ್ನೇಕೆ' ಬಯಸುವೆ ಎಂದು ಕೇಳಲು, ಆತನು "ಸಿಂಹವು ತಿಂದು ಎಸೆದುದರಿಂದ ನಾನು ಜೀವಿಸುವೆನಾದುದರಿಂದಲೂ, ಅದರ ಪ್ರಾಣಕ್ರೂರದ ಬೆಂಬಲದಿಂದ ನನ್ನ ದುಷ್ಟ ಶತ್ರುಗಳ ದ್ವೇಷಕ್ಕೊಳಪಡದವನಾಗಿರುವುದರಿಂದಲೂ, ಅತ್ಯಗಳನ್ನು ಪಾಲಿಸುವೆನು' ಎಂದು ಹೇಳಿದನು. ಆಗ ಅವನನ್ನು ಕುರಿತು, "ನೀನು ಅದರ ರಕ್ಷಣೆಗೊಳಪಟ್ಟಿರುವುದರಿಂದಲೂ ಮತ್ತು ಅದರ ಔದಾರ್ಯದ ವಿಷಯದಲ್ಲಿ ಕೃತಜ್ಞನಾಗಿರುವುದರಿಂದಲೂ, ಇದು ಹೆಚ್ಚು ಹುಲ್ಲಿನ ಬಿಕೆ ಹೋಗುವುದಿಲ್ಲ? ಹಾಗೆ ಮಾಡುವುದರಿಂದ ನೀನೂ ಅವನ ರಾಯಭಾರಿಯಾಗಬೇ" ಎಂದು ಕೇಳಲು, ಅದಕ್ಕೆ ಆತನು "ಹಾಗೆ ಮಾಡುವುದರಿಂದ ನಾನು ಅದರ ಕಾರ್ಯಕ್ಕೆ ಬಹಳಗಾಗುವ ಸಂಭವವಿರುವುದು" ಎಂದು ಉತ್ತರವಿತ್ತನು. ಅನಲೋ ಪಾಸಕನು ಅಗ್ನಿಯನ್ನು ನೂರೇರು ವರ್ಷದವರೆಸಗೂ ಪ್ರಜ್ವಲಿಸಿಟ್ಟಿದ್ದರೂ ಅವನು ಬಂದ ಬಾರಿ ಅಕಸ್ಮಾತ್ ಅದಂ ಜ್ವಾಲೆಗೆ ಸಿಕ್ಕಿಬಿದ್ದರೂ ಅದು ಅವನನ್ನು ಭಸ್ಮೀಭೂತನನ್ನಾಗಿ ಮಾಡದೆ ಬಿಡದು. ಒಂದುಸಾರಿ ದೊರೆಯ ಅಸ್ಥಾನಿಕನಿಗೆ ಹಣದ ಗಂಟು

ಮಾರುತಿ ಭಕ್ತಿ

ಒಂದು ಮಂದ ಕೆಳಗೆ

ಮಾರುತಿ—(ತನ್ನೊಳಗೆ) ಅಬ್ಬಬ್ಬಬ್ಬ! ಈ ಅಟವಿ ದನೆ. ಈ ಸುತಾಪ! ತಡೆಯಲಾರೆ—ಮುಂಗಿಸುತ್ತಿದೆ! ನೂರು ಯೋಜನಗಳ ಸಮುದ್ರವನ್ನು ಲಂಘಿಸಿದ ಆ ಧೈರ್ಯವೇನಾಗಿ ಹೋಯಿತೋ! ಲಿಲಾಸ್ಯಾನುವಾಗಿ ಸಂಜೀವಪರ್ವತವನ್ನು ಕೈಯಲ್ಲಿಟ್ಟುಕೊಂಡು ಬಂದ ಆ ಉತ್ಸಾಹವೇನಾಯಿತು! ನಾನು ಹನುಮಂತನೆಯೇ? ಅಲ್ಲವೆ! ಇದು ಸ್ವಪ್ನವಲ್ಲವಲ್ಲವೆ! ವಜ್ರಹೃದಯವು ಇಷ್ಟು ಮೃದುವಾಗಿ ಹೋಯಿತೇನು!

ಮಹಾ ವೈಭವದಿಂದ ನನ್ನ ರಾಮನ ಪಟ್ಟಾಭಿಷೇಕ ಮಹೋತ್ಸವನ್ನು ನೋಡಿದೆನು! ಇಲ್ಲಿ ನಾನು ಬುದ್ಧಿಯಿಲ್ಲದೆ ಕೂತುಕೊಂಡಿರುವುದೇನು! ಕಲಕಲ ಧ್ವನಿಯೊರೆದಿಗೆ ಅಲ್ಲಿ ಶುಭಕಾರ್ಯವೇನು! ನನಗೆ ಇಲ್ಲಿ ಮಲ ಮಲಾ ಕಣ್ಣೀರಿನ ಅಲೆಗಳೇ! ಮಳೆಯು ನಿಲ್ಲುವುದಿಲ್ಲ! ಭಯವು ತೊಲಗುವುದಿಲ್ಲ! ಅಭೀಷ್ಟವು ಸೇರುವುದಿಲ್ಲ!—ಅದು ದಂದಲೇ ನಾನು ಕೋರುತ್ತೇನೆ! ಆ ಸದಗಳು ತೊಂದರೆಪಡಿಸಲಾರವೆಂದೇ ನಾನು ಭಾವಿಸುತ್ತೇನೆ!

ಆಹಾ! ಏನು ಆ ಶಬ್ದ! ಮಿತ್ರರು, ಬಂಧುಗಳು, ವಾನರ ಪ್ರಮುಖರು, ದೇವತೆಗಳು-ಅವರೇನು ಇವರೇನು. ಹೇಗೆ ಒಬ್ಬರ ಹಿಂದೆ ಒಬ್ಬರು ಹೋಗುತ್ತಿರುವರೋ! ಎಷ್ಟು ಆನಂದ! ಎಷ್ಟು ಸರವಶತೆ! ಓಹೋ! ಅಲ್ಲಿ ಅಲ್ಲಿ!—ದೃಷ್ಟಿ ದೋಷವುಂಟಾಗುವದೆಂದೋ ಏನೋ ಆ ರಕ್ಷಗಳ ಕಲಶವನ್ನು ಮೆಚ್ಚಿ ಕೊಂಡು ಆತ ತೆಗೆದುಕೊಂಡು ಹೋಗುತ್ತಿದ್ದಾನೆ! ಎಷ್ಟು ಮಚ್ಚಿಟ್ಟುಕೊಂಡಿದ್ದರೂ ಥಳ ಥಳ ಎಂದು ಒಟ್ಟೆಯ ಮೂಲಕ ಕಾಂತಿಯೂ ಪ್ರಕಾಶಿಸುತ್ತಾ "ಇರುವೆ" ನೆನ್ನುವಂತೆ ಇಣಿಕಿ ನೋಡುತ್ತಿದೆ, ಆ

ಬಹುಮಾನವಾಗಿ ದೊರೆಯಬಹುದು. ವತ್ತೊಂದು ವೇಳೆ ಆತನ ತಲೆಯೇ ಹೋಗಬಹುದು. ಆದುದರಿಂದಲೇ ದಾಶನಿಕರು, "ನಾವು ರಾಜರ ಚರಿತ್ರ ಚಿತ್ತದ ವಿಷಯದಲ್ಲಿ ಯಾವಾಗಲೂ ಎಚ್ಚರಿಕೆಯಿಂದಿರಬೇಕು; ಏಕೆಂದರೆ, ಅವರು ಕೆಲವು ವೇಳೆಗಳಲ್ಲಿ ನಮ್ಮನ್ನು ಸ್ಮರಿಸಿದರೂ ಕೋಪಗೊಳ್ಳುವರು, ಮತ್ತು ಕೆಲವು ಸಮಯದಲ್ಲಿ ಒರಟುನಡವಳಿಕೆಯುಳ್ಳವರಾಗಿದ್ದರೂ ಭಕ್ತಿಯಿಂದ ಗೌರವಿಸುವರು." ಎಂದೂ ಮತ್ತು "ಅತೀ ಸಲಿಸವು ರಾಜರ ಚಾಟುವಾಗಿಗಳಾದ ಸಭಾಸದರಿಗೆ ಪಾಂಡಿತ್ಯವಾಗಿಯೂ ಜ್ಞಾನಿಗಳಿಗೆ ಕಲಂಕವಾಗಿಯೂ ಇರುವುದು" ಎಂದು ಹೇಳಿರುವರು. ಬಾಗರೂಕನಾಗಿರು; ನಿನ್ನ ಸ್ವಾಭಾವಿಕ ಗುಣಗಳನ್ನು ಸರಿಯಾಗಿ ಕಾಪಾಡಿಕೋ ಮತ್ತು ಹಾಸ್ಯ ಕುಜ್ಞೋದ್ಯಗಳನ್ನು ವಿಕಟಕವಿಗಳಿಗೂ (ಹಾಸ್ಯಗಾರರಿಗೂ) ರಾಜಪ್ರತಿಷ್ಠಿತರಿಗೂ ಬಿಟ್ಟು ಬಿಡು.

[ಮುಂದುವರಿಯುವುದು.

ಕವು ಇದ್ದುದಂದ ಸಮ್ಮ ಜಾನಕಿ ರಾಮರು ದಣಿಗುವವರಿಗೂ ಜಲವಾಸ ಮಾಡುತ್ತಿದ್ದರೆ ಎಂದಾದರೂ ನೋಡುವನೇ ಈ ನನ್ನ ಪಾಪಿ ನಯನಗಳು! ಛಲ, ಜಲಾ! ಯಾವ ದೇಶದಿಂದ ಬಂದಿರುವದೆ ಈ ದಶದ ರಥ! ಇದರಲ್ಲಿ ಕುಳಿತು ಮೇರವಣಿಗೆಯಾಗಬೇಕೆಂದು ಹಟಹಿಡಿಯಲೂ ನನ್ನ ಸೀತಾಮಾತೆಯೆ! ಎಂಥ ಮದ್ದಾದ ಕೆಲಸ!! ಶಹಬಾಷ್! ನಮ್ಮ ರಾಮನಿಗೆ ಅಂಕಿತವನ್ನು ಮಾಡುತ್ತಿರುವ ಈ ಅಪರೂಪಗಳಿಗೆ ಬೆಲೆ ಕಟ್ಟುವದು ನನಗೆ ಸಾಧ್ಯವೇ! ಚಿತ್ರ ವಿಚಿತ್ರಗಳೂ ಅತಿಶಯ ಆಶ್ಚರ್ಯಗಳೂ ನೋಡಿದಂತೆಲ್ಲಾ ಹುಚ್ಚನನ್ನಾಗಿ ಮಾಡುತ್ತಿವೆ. ಇದ್ದ ವಿಷಯವೂ ಕೆಟ್ಟು ತಲೆಗೆ ಆಲೋಚನೆಯ ಅಣುಮಾತ್ರವೂ ಹತ್ತದೆ ಇರುವದಲ್ಲಾ! ರಾವಣ ಸಸ್ನುಧಾನ ವರ್ತನನು—ಎಂಬಿದ ಭಂಟ—ಬಲಭದ್ರ, ಹೌದು. ಆದರೆ ನಾನು ಎಂತಹ ಬಹುಮಾನವನ್ನು ಸಲುಸಿಸಬೇಕು? ಬರೀ ಕೈಯ್ಯಲ್ಲಾಡಿಸುತ್ತಾ ಯಾವ ಮೋರೆಯನ್ನಿಟ್ಟುಕೊಂಡು ಹೋಗುವದು! ಯೋಗ್ಯತೆಯನ್ನರಿಯದೆ ಗಾಳಿಯಲ್ಲಿ ಗೋಪುರವನ್ನು ಕಟ್ಟುವದಾಗಲಿ—ಇಷ್ಟಕ್ಕೂ ನಾನೇನು ಮಾಡಬಲ್ಲೆನು! ಕಾಯಿ ಹೀಡು ತಿಂದು ಕಾಲವನ್ನು ಕಳೆಯುವ ಬ್ರಹ್ಮಚಾರಿ—ನಾನೇನು ಕೊಡಬಲ್ಲೆ! ನರಜನ್ಮವನ್ನು ಪಡೆದು ಹಣವಂತರ ಕುಟುಂಬದಲ್ಲಿ ಹುಟ್ಟಿದ್ದಲ್ಲಿ ಹೇಗಿರುತ್ತಿತ್ತ? ಅಷ್ಟಕಷ್ಟಗಳಲ್ಲಿ ದಾರಿದ್ರ್ಯ ಕಷ್ಟವೆಂತಹುದೋ ಈಗ ಸ್ವಾನುಭವಕ್ಕೆ ಬಂತು? ಛಿ, ಛೀ! ಹುಚ್ಚು ಊಹೆಗಳು—ಮತಿಯಿಲ್ಲದ ಕೋರಿಕೆಗಳು! ರಾವಣನನ್ನು ಹೃದಯದಲ್ಲಿ ಹಿಡಿದು ಇಟ್ಟುಕೊಂಡಿರುವ ನನ್ನ ಮನಸ್ಸು ಪುನಃ ಏಹಿಕ ವಿಷಯಗಳ ಕಡೆ ಬಾಗುತ್ತಿದೆ ಏನು! ಅಣು ಅಣು ಆ ರಾಮನನ್ನು ಐಕ್ಯಪಡಿಸಿಕೊಂಡ ನಾನು ಊಹುಂ-ತಿರುಮಾರಾಗುತ್ತಿರುವೆನು-ಏನು ಪಾಪ! ಕಾರ್ಯಸಿದ್ಧಿಯಾಗ ವನರಿಗೂ ಹೀಗೆ ತಪಿಸುವದು ಸಹಜವೆಂದು ಭಾವಿಸುತ್ತೇನೆ. ಪ್ರತಿ ಜೀವಿಗೂ! ವಿಕ್ಕವರ ವಿಷಯ ವೇಕೆ? ನನ್ನ ರಾಮನೇ ಸಾಕ್ಷಿ! ಸೀತಾ ಮಹಾತಾಯಿಗಾಗಿ ಎಷ್ಟು ಚಿಂತಾಮಗ್ನನಾದನು! ಎಷ್ಟು ಹಾಹಾಕಾರವನ್ನು ಮಾಡಿದನು!

ಒಂದು ಬಾರಿ ಲಂಘಿಸಿ

ರಂ ರಾಂ ರಾಂ ರಾಂ!

ನಮ್ಮ ರಾಮನ ದಯೆಬಂತು: ಸಂತಾಪವು ತೀರಿತು. ಧೈರ್ಯವು ದೊರೆಯಿತು ಉಪಾಯವು ಹೊಳೆಯಿತು. ತಾತನ ಹತ್ತಿರ ಹೋದಲ್ಲಿ ಕಾರ್ಯಸಾಫಲ್ಯವಾಗುವದು. ನನಗೀಗ ಸಹಾಯಮಾಡುವನು ಆತನೇ! ಮತ್ತೊಬ್ಬರಿಂದ ಸಾಧ್ಯವಿಲ್ಲ. ಪುಣ್ಯ ಕಾಲವು ಸ್ವಲ್ಪವೂ ವ್ಯರ್ಥ ಹೋಗಕೂಡದು. ಇನ ಕಾಲವಿಲ್ಲ. ಹೋಗಿ ಬರುತ್ತೇನೆ.

ಲಂಘನೆಮಾಡುತ್ತ ಹಾಡುವನು

ರಾಂ ರಾಂ ರಾಂ ರಾಂ
ರಾಘವ ರಾಂ! ಸೀತಾರಾಂ
ದಶಕಂಠ ರಾಂ! ಜಾನಕಿರಾಂ
ರಾಂ ರಾಂ ರಾಂ ರಾಂ

(ಅದೃಶ್ಯನಾಗುವನು.)

[ಮುಂದುವರಿಯುವುದು.

ಸತ್ಯವಾದಿ

ಸಹಕಾರಿ ತತ್ವ

ಪ್ರಪಂಚದಲ್ಲಿ ಮನುಷ್ಯನು ಜನಿಸಿದಾಗಲೇ ಸಂಘ ಜೀವನವೂ ಪ್ರಾರಂಭವಾಯಿತು. ಪ್ರಾಚೀನ ಸಂಘ ಜೀವನವು ಎಷ್ಟೇ ಲೋಪದೋಷಗಳಿಂದ ಕೂಡಿಕೊಂಡಿದ್ದರೂ ಒಂದೆರಡು ವಿಷಯಗಳಲ್ಲಿ ವಿಶೇಷತಃ ಆರ್ಥಿಕ ವಿಷಯದಲ್ಲಿ ಒಂದು ನಿಘಂಟಾದ ಶಾಂತತೆಯಿಂದ ಕೂಡಿದ್ದಿತು. ಸಂಘದಲ್ಲಿ ತೃಪ್ತಿಯು ನೆಲೆಗೊಂಡಿದ್ದಿತು. ಇದು ಆಗಿನ ಸಂಘ ಜೀವನವು ಇದ್ದ ರೀತಿಯಲ್ಲಿಯಾದರೂ ಪ್ರತ್ಯೇಕ ಪ್ರತಿಯೊಬ್ಬ ವ್ಯಕ್ತಿಯೂ ನಿರ್ವಿಘ್ನವಾಗಿ ಅನುಸರಿಸುತ್ತಿದ್ದ ಕೆಲವು ಆಚಾರಗಳಿಂದಲೂ ವ್ಯವಹಾರಧರ್ಮದಿಂದಲೂ ನಿರಾಕುಶವಾಗಿ ಹರಿಯಿಕೊಂಡಿತ್ತು. ಅದನೆ ಪರಿಪೂರ್ಣ ಜನಜೀವನವು ನಾನಾ ವಿಧವಾದ ದೇಶಾಚಾರಂಪ್ರಳ ಪಂಡೇಶೀಯರ ಸಂಪರ್ಕಗಳಿಂದ ವ್ಯತ್ಯಾಸವಾಗಿ ಸರ್ಕಾರದವರ ಆಪ್ಯಾಯಿತವು ಅವಶ್ಯಕವಾಗಿ ಪರಿಣಮಿಸಿತು. ಅಂದಿನಿಂದಲೇ ಆರ್ಥಿಕ ಕರಣಸಂಸ್ಥೆಗಳ ಪ್ರಪಂಚದಲ್ಲಿ ನಲೆಗೊಂಡುವು. ಅವುಗಳಲ್ಲಿ ಈಗ ಸರಕಾರ ಸಂಘಗಳಿಂಬ ಹೆಸರಿನಿಂದ ಬೇರೆ ಬೇರೆ ರೂಪದಲ್ಲಿ ಕಲಸ ಮಾಡುತ್ತಿರುವುವು ಮುಖ್ಯವಾದವುಗಳಾಗಿವೆ.

ಸಂಘಜೀವಿಯಾದ ಮನುಷ್ಯನು ಯಾವಾಗಲೂ ಸರ್ವತಂತ್ರಸ್ವತಂತ್ರನಾಗಿರಲು ಈಗಿನ ಸಾಮಾಜಿಕ ಸ್ಥಿತಿಯಲ್ಲಿಯೂ ಆಗುವುದೇ ಇಲ್ಲ. ದಿನಮಹಿ ಅವನ ಬಾಹ್ಯಾಚಾರಗಳಿಗೆ ಅಳತೆಯನ್ನು ಇತರರ ಮೇಲೆ ಅಂದರೆ ತನ್ನ ಸಂಘಜನರ ಮೇಲೆ ಅನಿವಾರ್ಯದಿಂದ ಅವಲಂಬಿಸಿರಬೇಕಾಗಿ ಬಂದಿದೆ. ಇಲ್ಲದಿದ್ದರೆ ಅವನದು ಎಡವಟ್ಟಾದ ಹಾದಿಯಾಗುತ್ತದೆ. ಜೀವನಕ್ಕಾಗಿ ಪರಾವಲಂಬನವನ್ನು ಮಾಡಿ ಧನಾರ್ಜನೆಯನ್ನು ಮಾಡುವುದು ಸರ್ವಸಾಮಾನ್ಯವಾಗಿ ಪರಿಣಮಿಸಿತು.

ಬರಬರುತ್ತಾ ಉದ್ಯೋಗ ಜೀವನವೂ ಸಹವ್ಯವಸಾಯದಂತೆ ಪೈಪೋಟಿಗಾಗಿ ಅದಕ್ಕೆ ತಕ್ಕ ಲಕ್ಷಣಗಳುಳ್ಳವನಿಗೆ ಮಾತ್ರ ಅನುಕೂಲವಾಲುವಾಗಿ ಇತರರಿಗೆ ಕಷ್ಟಸಾಧ್ಯವಾಯಿತು. ಇದು ಆಧುನಿಕ ರೀತಿಯಲ್ಲಿ ಜೀವನವನ್ನು ಮಾರ್ಪಾಡುಮಾಡಿಕೊಂಡಿದ್ದ ಸಂಘದ ಮುಖ್ಯ ಲಕ್ಷಣವಾಯಿತು. ಕಷ್ಟಕ್ಕೆ ಒಳಗಾದವರು ಪ್ರಾಚೀನ ಪದ್ಧತಿಯಲ್ಲೇ ಜೀವಿಸಲು ಪ್ರಯತ್ನಿಸಿದರು. ಹುಚ್ಚು ಹೊಳೆಯಿಂತೆ ಮೇಲಿಂದಮೇಲೆ ತತ್ವಜ್ಞಾನವಾರವಾಗಿ ಬದಲಾಯಿಸತ್ತ ಬರುತ್ತಿದ್ದ ನೂತನ ಜೀವನದ ವೇಗವು ಪ್ರಾಚೀನ ಪದ್ಧತಿಗೆ ಹಿಂತಿರುಗಲೆತ್ನಿಸಿದವರನ್ನು ತಡೆಮಾಡಿ ಈ ಕಡೆಗೆ ಎಳೆಯಲು ಯತ್ನಿಸಿತು. ಅದರ ಫಲನೇ ಇಂದಿನ ಸಹಕಾರ ಪದ್ಧತಿ.

ಧನಾರ್ಜನೆಯನ್ನು ಮಾಡಿ ಸ್ವಾತಂತ್ರ್ಯವನ್ನು ಗಳಿಸಿ ಸಂಘದಲ್ಲಿ ಪ್ರಮುಖನಾಯಕನಾಗಬೇಕೆಂಬ ಆಶೆಯು ಯಾರನ್ನೂ ಬಿಡುವುದಿಲ್ಲ. ಆದರೆ ಹಾಗೆ ಮಾಡಲು ಮಾತ್ರ ಸಾವಿರದಲ್ಲಿ ಒಬ್ಬರಿಗೆ ಅನುಕೂಲವಿರುವುದಿಲ್ಲ. ಆದಕ್ಕಾಗಿ ಸಾವಿರ ಜನರೂ ಸೇರಿ ಒಬ್ಬನಂತೆ ತಮ್ಮ ಪ್ರಯತ್ನವನ್ನು ನೆರವೇರಿಸಿದರೆ, ಮಹಾಧನಿಕನಂತೆ ಸಾವಿರ ಜನರೂ ಲಾಭವನ್ನು ಅನುಭವಿಸಬಹುದು. ಇದೇ ಸಹಕಾರದ ಮುಖ್ಯ ತತ್ವ. ಈ ತತ್ವಸ್ಫೂರ್ತಿಸಾಲನೆಯಲ್ಲಿ ಪ್ರಾರಂಭದಲ್ಲಿ ಇದ್ದ ಆಚರಣೆಯು ಈಗ ರೂಪುಗೊಂಡಿರುತ್ತದೆ. ಕೆಲವು ವಿಚಾರಗಳಲ್ಲಿ ಇದರಿಂದ ಒಳ್ಳೆಯದಾಗಿರುತ್ತದೆ. ಕೆಲವು ವಿಚಾರಗಳಲ್ಲಿ ಇದರಿಂದ ಕೆಟ್ಟುದಾಗಿರುತ್ತದೆ. ಇದನ್ನು ಇನ್ನೊಂದಾವರ್ತಿ ಸಾವಧಾನವಾಗಿ ಚರ್ಚಿಸಲಾಗುತ್ತದೆ.

ಶ್ರೀಮತಿ ಕಮಲಾ ನೆಹರೂರವರ ನಿಧನ

ಶ್ರೀಮತಿ ಕಮಲಾ ನೆಹ್ರೂರವರು ಕಳೆದ ಶುಕ್ರವಾರದ ದಿವಸ ಲಾಸೋನಿನಲ್ಲಿ ದೈವಾಧೀನರಾದರೆಂಬ ವಿಷಯವನ್ನು ಪ್ರಕಟಿಸಲು ತುಂಬಾ ವಿಷಾದಿಸುತ್ತೇವೆ. ಇವರು ಸಾಯುವುದಕ್ಕೆ ಹಿಂದಿನ ದಿವಸದಲ್ಲೂ ಕೂಡ ಇವರ ಆರೋಗ್ಯವು ಉತ್ತಮಗೊಳ್ಳುತ್ತಿರುವುದಾಗಿಯೂ ಮತ್ತು ಮುಂದಿನ ಲಕ್ನೋಕಾಂಗ್ರೆಸ್ಸಿನ ಪೈಸಿಡೆಂಟರಾದ ಇವರ ಪತಿ ಶ್ರೀಯುತ ಜವಹರಿಲಾಲರು ಇಂಡಿಯಾಕ್ಕೆ ಈ ತಿಂಗಳು ತಾ||೮ ಕ್ಕೆ ತಲಪುವರೆಂದೂ ಪ್ರಕಟನವಾಗಿದ್ದ ವಾರ್ತೆಯನ್ನು ನೋಡಿ ಸಂತೋಷಗೊಂಡಿದ್ದೆವು. ಆದರೆ ಈ ಆಶಾಜನಕವಾರ್ತೆಯು ಸುಳ್ಳಾಗಿ ಪರಿಣಮಿಸಿತು. ಶ್ರೀಮತಿಯವರು ದೈವಾಧೀನರಾದರು. ಇವರಿಗೆ ಕೇವಲ ೩೫ ವರ್ಷಗಳಾಗಿದ್ದವು. ಸತಿಸೇವೆ ದೇಶಸೇವೆಗಳನ್ನು ಸಂತೃಪ್ತಿಯಾಗಿ ಮಾಡಿದರು. ದೇಶಸೇವಾ ಕಾರ್ಯದಲ್ಲಿ ಪಂಡಿತರಿಗೆ ಎಷ್ಟೋ ಉತ್ಸಾಹವನ್ನುಂಟುಮಾಡುತ್ತಿದ್ದರು. ಇವರ ಮರಣದಿಂದ ದೇಶಕ್ಕೆ. ಅದರಲ್ಲೂ ಇಂತಹ ಕಾಲದಲ್ಲಿ ತುಂಬಾ ನಷ್ಟವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ ಇಂತಹ ಕಟುತರವಾದ ದುಃಖವನ್ನು ಸಹಿಸಲು ಪರಮಾತ್ಮನು ಜವಹರಿಲಾಲರಿಗೆ ಧೈರ್ಯವನ್ನೀಯಲೆಂದು ಕೋರುತ್ತೇವೆ

ವಿಶ್ವವಿಖ್ಯಾತ ನಟನಾದ ಚಾರ್ಲಿಚಾಪ್ಲಿನ್ ಈಚೆಗೆ ತಯಾರಿಸಿದ "ಮಾಡರ್ನ್ ಟೈಮ್ಸ್" ಎಂಬ ಫಿಲಮ್ಮನ್ನು ಜರ್ಮನಿಯಲ್ಲಿ ಪ್ರದರ್ಶಿಸಕೂಡದೆಂದು ಹಿಟ್ಲರ್ ಹುಕುಂ !

೦ ೦

ದಿಲ್ಲಿಯಲ್ಲಿ ಒಂದು ವಿಚಿತ್ರವಾದ ಮೊಕದ್ದಮೆ. ಒಬ್ಬ ಆಳಿಯ ಮಾವನ ಮೇಲೆ ದಾವೆ ಮಾಡಿದ ಒಬ್ಬಳು ಹುಡುಗಿಯನ್ನು ತೋರಿಸಿ ಇನ್ನೊಬ್ಬಳನ್ನು ಕೊಟ್ಟ ಆರೋಪಣೆಯದು. ನನ್ನ ಮಾವ ಮೊದಲು ತೋರಿಸಿದ ಹುಡುಗಿ ಸಲಕ್ಷಣೆಯಾಗಿದ್ದಳು. ನನಗೆ ಮದುವೆಮಾಡಿ ಕೊಟ್ಟವಳು ವಿಲಕ್ಷಣೆ; ಕುರೂಪಿ' ಎಂಬುದು ಆತನ ಹೇಳಿಕೆ. ನ್ಯಾಯಾಧಿಕಾರಿಗಳು ಮೂವರು ಪರವಾಗಿ ತೀರ್ಪು ಕೊಟ್ಟರು, ಒಬ್ಬಳನ್ನು ತೋರಿಸಿ ಇನ್ನೊಬ್ಬಳನ್ನು ಕೊಟ್ಟುದಕ್ಕೆ ಆಧಾರವಿಲ್ಲ. ಮತ್ತೆ ತನ್ನ ಹುಡುಗಿ ಸುಂದರಿಯೆನ್ನುವ ಅಧಿಕಾರ ತಂದೆಗಿಲ್ಲವೇ? ಹೀಗೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಬರೆದಿದ್ದಾರೆ. ಮದುವೆ ಯಾರಿಗೆ? ದಾವೆ ಯಾರ ಮೇಲೆ?

ವರ್ತಮಾನಗಳು

ಲೇಡಿ ಎಡ್ವರ್ಡ್ ಜಕ್ಕವರ್ತಿಯವರು ಅವರ ತಂದೆ ತಾಯಂದಿರಿಗಿಂತ ಧನವಂತರು. ಅವರ ಆಸ್ತಿಯ ಮೇಲೆ ವಾರ್ಷಿಕ ವರಮಾನ ೧,೨೦೦,೦೦೦ ಪೌಂಡುಗಳಷ್ಟು. ಲಂಡನ್ನು ನಗರದಲ್ಲಿ ಕೆಲವು ಪೇಟೆಗಳು ಇವರ ಸ್ವಂತ ಆಸ್ತಿ. ವೇಲ್ಸಿನಲ್ಲಿ ಕೆಲವು ಕಲ್ಲಿದ್ದಲುಗಣಿಗಳು, ಸ್ಕಾಟ್ಲೆಂಡಿನಲ್ಲಿ ವ್ಯವಸಾಯ ಭೂಮಿಗಳು, ಕಾರ್ನವಾಲ್, ಲಾಂಕಷೈರ್ ಜವಿಣಿಗಳೂ ಇವರ ವರಮಾನವನ್ನು ವೃದ್ಧಿಪಡಿಸುತ್ತಲಿವೆ ಅದೂ ಅಲ್ಲದೆ ಸರ್ಕಾರವು ಇವರಿಗೆ ವರ್ಷಂಪ್ರತಿ ೪,೭೦,೦೦೦ ಪೌಂಡುಗಳ ಸಂಭಾವನೆ ಕೊಡುವುದು. ಅದರಲ್ಲಿ ೧೨೦,೦೦೦ ಪೌಂಡುಗಳು ಇವರ ಸ್ವಂತ ಖರ್ಚಿಗೂ, ವಿಕ್ಟೋರಿಯಾ ರಾಜಕುಟುಂಬದವರ ಖರ್ಚಿಗೂ ವಿನಿಯೋಗಿಸಲ್ಪಡುವುದೆಂದು ತಿಳಿಯಬಂದಿದೆ.

ಹಾಗೆಯೇ ಪ್ರಸಿದ್ಧ ಕಲಾಜ್ಞಿಗಳಾದ ಮಿ|| ಬ್ಯೂಸ್ಟರರು, ಕೆಲಕಾಲ ಹಿಂದೂ ದೇಶದಲ್ಲಿ ಪ್ರವಾಸ ಬೆಳೆಯಿಸಿ ಈಗ ಹಿಂತಿರುಗಿರುವರು. ಹಿಂದೂ ದೇಶದ ಅನೇಕ ತತ್ವಜ್ಞಾನಗಳ ಮಹತ್ವವನ್ನು ಬಹಳ ಕೊಂಡಾಡುತ್ತಿದ್ದಾರೆ. ಜಗತ್ತಿನಲ್ಲಿ ಹಿಂದೂದೇಶದಲ್ಲಿ ಕಲ್ಪನೆಯಾದ ತತ್ವಜ್ಞಾನವು ಶ್ರೇಷ್ಠವಾದುದು. ಅದನ್ನು ಏವರಿಗಲು ಅಸಾಧ್ಯ, ಅನುಭವಿಸಿದರೆ ಮಾತ್ರ ತಿಳಿಯುವುದು ಎಂದು ಸಾರುತ್ತಿದ್ದಾರೆ. ಮಹಾತ್ಮ ಗಾಂಧಿ, ಕವಿ ರವೀಂದ್ರನಾಥ ಠಾಕೂರರ, ಶ್ರೀಮತಿ ಸರೋಜಿನಿನಾಯಿಡುರವರು, ಇನ್ನೇ ಮೊದಲಾದ ಮಹಾವ್ಯಕ್ತಿಗಳ ಪರಿಚಯ ಮಾಡಿರುವರು. ಅವರೊಡನೆ ಅನೇಕ ದಿನಗಳನ್ನು ಕಳೆದಿದ್ದರು. ಮಹಾತ್ಮ ಗಾಂಧಿಯವರ ತತ್ವ ಇತ್ಯಾದಿಗಳನ್ನು ನೋಡಿ ಅವರ ಗುಣಗಳನ್ನು ಪರಿಶೀಲಿಸಿ ಅವರನ್ನು ಬಹಳವಾಗಿ ಗೌರವಪೂರ್ವಕ ಮಾತುಗಳಿಂದ ಶ್ಲಾಘಿಸುತ್ತಿದ್ದಾರೆ ಅನೇಕ ವಿಚಾರಗಳಲ್ಲಿ ಮಹಾತ್ಮಜಿಯವರ ಪ್ರೇರಣೆಯು ಇವರ ಮೇಲೆ ಹರಡಿರುತ್ತದೆ. ಕವಿ ರವೀಂದ್ರರ ಕಲಾಜ್ಞಾನ, ಕವಿತೆ ಇತ್ಯಾದಿಗಳನ್ನು ನೋಡಿ ಬೆರಗಾಗಿರುವರು. ಶ್ರೀ ಸರೋಜಿನಿ ದೇವಿಯಲ್ಲಿ ಒಂದು ಮಹಾ ಸ್ತ್ರೀರತ್ನವನ್ನು ಕಾಣಿರುವರು.

ತಾ|| ೨೬ ರಲ್ಲಿ ಜಪಾನಿನ ಮುಖ್ಯ ಪಟ್ಟಣವಾದ ಟೋಕ್ಕಿಯೋದಲ್ಲಿ ಒಂದು ದಂಗೆಯಾಗಿದೆ. ದಂಗೆಗಾರರು ಜಪಾನಿನ ಪ್ರಧಾನ ಮಂತ್ರಿಗಳಾದವೆ || ಓಕಾಡರವರನ್ನೂ ಫೈನಾನ್ಸ್ ಮಂತ್ರಿಗಳಾದ ಟಾಕಹಷಿ ಮತ್ತು ಅಡ್ಜರಲ್ ಸೈಟೋ ಎಂಬ ಮುಖ್ಯಾಧಿಕಾರಿಗಳನ್ನು ಕೊಲೆ ಮಾಡಿರುವರಲ್ಲದೆ ಅನೇಕ ಮುಖ್ಯಾಧಿಕಾರಿಗಳನ್ನು ಕೊಲೆ ಮಾಡಲು ಪ್ರಯತ್ನಿಸಿರುವರು. ಅಲ್ಲಿನ ಪರಿಸ್ಥಿತಿಯು ಅತ್ಯಂತ ಭೀಕರವಾಗಿದೆ. ಜಾರಿ ಕಾಗೆಟ್ಟಿರುವರು. "ಮಾರ್ಷಲ್ ಲಾ" ಜಾರಿಗೆ ತರಲಾಗಿದೆ.

ಸಂಯುಕ್ತ ಪ್ರಾಂತ್ಯಗಳ ಎಟಾವಾ ಜಿಲ್ಲಾ ಬೋರ್ಡಿನವರು ಹುಡುಗಿಯರಿಗೆಲ್ಲಾ ಕಡ್ಡಾಯದ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತಂದಿದ್ದಾರೆ. ಇದರಿಂದ ೯ ವರ್ಷದಿಂದ ೧೧ ವರ್ಷದವರೆಗಿರುವ ಹಿಂದೂ ಬಾಲೆಯರೂ, ೫ ವರ್ಷದಿಂದ ೯ ವರ್ಷದವರೆಗಿರುವ ಮುಸಲ್ಮಾನರ ಬಾಲೆಯರೂ ಶಾಲೆಗೆ ಹೋಗಬೇಕು.

ಜೀವಶಾಸನದ ಕ್ರಮಗಳು

ಸತ್ತವರೊಡನೆ ಮಾತನಾಡುವ ಮಾರ್ಗಗಳು

(ಲೇಖಕರು—" ಕ. " ಯವರು)

[ಸಕಲ ಹಕ್ಕುಗಳನ್ನು ಲೇಖಕರು ಹೊಂದಿರುತ್ತಾರೆ]

ಈ ಸುಲಭವಾದ ಮಾರ್ಗವು, ಸ್ವೇಚ್ಛಾಲಿಪಿ ಮಾರ್ಗವನ್ನೇ ಅನುಸರಿಸಿರುತ್ತದೆ. ವಾಸ್ತವವಾಗಿ ನೋಡಿದರೆ, ಈ ಮಾರ್ಗವು, ಸ್ವೇಚ್ಛಾಲಿಪಿ ಮಾರ್ಗದ ಒಂದು ಬದಲಾವಣೆಯೆಂದೇ ಹೇಳಬೇಕಾಗಿದೆ. ಈ ಮಾರ್ಗದ ಕ್ರಮವೇನೆಂದರೆ—ಸ್ವೇಚ್ಛಾಲಿಪಿ ಮಾರ್ಗದಲ್ಲಿರುವಂತೆ ಈ ಮಾರ್ಗದಲ್ಲಿಯೂ ಕೂಡ, ಒಂದು ಕಾಗದವನ್ನು ಹಾಳು, ಸೀಸದ ಕಡ್ಡಿಯನ್ನು ಅದರ ಮೇಲೆ ಊರಿ, ಹಸ್ತವು ತನ್ನಷ್ಟಕ್ಕೆ ತಾನೇ ಸ್ವೇಚ್ಛೆಯಿಂದ ಚಲಿಸುವಂತೆ ಮಾಡಬೇಕು. ಆದರೆ, ಈ ಮಾರ್ಗದಲ್ಲಿ ಒರಿಯ ಕಾಗದವನ್ನು ಇಡುವುದಿಲ್ಲ ಮೊದಲೇ ಇದರಲ್ಲಿ ಅಕ್ಷರಗಳನ್ನು ಒತ್ತುಗಳನ್ನೂ ಬರೆದಿರಬೇಕು. ಹೀಗೆ ಮಾಡುವುದರಿಂದ, ಸತ್ತಿರುವವರಿಗೆ ಒಂದು ವರ್ಣಮಾಲೆಯನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಜೀವಸಂಭಾಷಣೆ ಮಾಡಬೇಕೆನ್ನುವರು, ಮನೆಯಲ್ಲಿ, ಯಾವ ಭಾಷೆಯನ್ನಾಡುವರೋ ಆ ಭಾಷೆಯ ವರ್ಣಮಾಲೆಯನ್ನು ಕಾಗದದ ಮೇಲೆ ಬರೆದಿಟ್ಟಿರೆ, ಈ ಮಾರ್ಗವು ಬೇಗನೆ ಸಿದ್ಧಿಸುವುದು. ಈ ಮಾರ್ಗದಲ್ಲಿ, ಕೈಯಲ್ಲಿ ಹಿಡಿದಿರುವ ಸೀಸದ ಕಡ್ಡಿಯು, ಅಕ್ಷರಗಳನ್ನಾಗಲೀ, ವಾಕ್ಯಗಳನ್ನಾಗಲೀ ಬರೆಯುವುದಿಲ್ಲ. ಮೊದಲೇ ಕಾಗದದ ಮೇಲೆ ಇರುವ ಅಕ್ಷರಗಳಲ್ಲಿ ಕೆಲವನ್ನು ಕ್ರಮವಾಗಿ ತೋರಿಸುತ್ತದೆ. ಸೀಸದ ಕಡ್ಡಿಯು ಚಲಿಸುತ್ತಾ ಕೆಲವು ಅಕ್ಷರಗಳ ಮೇಲೆ ನಿಲ್ಲುವುದು. ಹಾಗೆ ಸೀಸದ ಕಡ್ಡಿಯು ತೋರಿಸುವ ಅಕ್ಷರಗಳನ್ನೂ ಒತ್ತುಗಳನ್ನೂ ತೋರಿಸಿದ ಕ್ರಮದಲ್ಲಿಯೇ ಬೇರೊಂದು ಕಾಗದದಲ್ಲಿ ಬರೆದದ್ದೇ ಆದರೆ ವಾಕ್ಯಗಳಾಗುವು. ಈ ವಾಕ್ಯಗಳು ನಮ್ಮ ಪ್ರಶ್ನೆಗಳಿಗೆ ಉತ್ತರಗಳಾಗಿರುತ್ತದೆ ಬೇಕಾದರೆ ಸೀಸದ ಕಡ್ಡಿಯ ಬದಲಾಗಿ ಸುಣ್ಣಸಾಗಿರುವ, ಸುಲಭವಾಗಿ ಕಾಗದದ ಮೇಲೆ ಚಲಿಸುವ ಯಾವ ಕಡ್ಡಿಯನ್ನಾಗಲೀ ಉಪಯೋಗಿಸಬಹುದು. ಇಲ್ಲಿರುವ ಮುಖ್ಯ ತತ್ವವೇನೆಂದರೆ, ಸತ್ತವರು ತಮ್ಮ ಇಚ್ಛಾನುಸಾರವಾಗಿ ಮೊದಲೇ ಬರೆದಿಟ್ಟಿರುವ ಅಕ್ಷರಗಳನ್ನು ತೋರಿಸಿ ತಮ್ಮ ಮನಸ್ಸಿನಲ್ಲಿರುವ ವಾಕ್ಯಗಳನ್ನು ವ್ಯಕ್ತಪಡಿಸುತ್ತಾರೆ ಸ್ವೇಚ್ಛಾಲಿಪಿಯಲ್ಲಿದ್ದಂತೆ ಈ ಮಾರ್ಗದಲ್ಲಿ ಅಕ್ಷರಗಳನ್ನು ಅವರೇ ನಮ್ಮ ಕೈಯಿಂದ ಬರೆಯಿಸಬೇಕಾಗಿಲ್ಲ. ಈಗ ನಾವು ಒಂದು ವಾಕ್ಯವನ್ನು ಬರೆಯುವುದಕ್ಕೂ, ವರ್ಣಮಾಲೆಯಲ್ಲಿ ತೋರಿಸಿ ಆ ವಾಕ್ಯವನ್ನು ವ್ಯಕ್ತಪಡಿಸುವುದಕ್ಕೂ ಬಹಳ ವ್ಯತ್ಯಾಸವಿರುವುದು. ಬರೆಯುವುದು, ತೋರಿಸಿ ವ್ಯಕ್ತಪಡಿಸುವುದಕ್ಕಿಂತಲೂ ಕಷ್ಟಕರವಾದುದು. ಇದಲ್ಲದೆ ಸತ್ತವರು ಸ್ವೇಚ್ಛಾಲಿಪಿಯಲ್ಲಿ, ಅಕ್ಷರಗಳನ್ನು ಅಭ್ಯಾಸವಿಲ್ಲದ ನಮ್ಮ ಕೈಯಿಂದ ಬರೆಯಿಸಬೇಕೆಂದರೆ ಬಹಳ ತೊಡಕುಗಳುಂಟಾಗುತ್ತವೆ. ಇದಕ್ಕೆ ಬದಲಾಗಿ ವರ್ಣಮಾಲೆಯಲ್ಲಿ ನಮ್ಮನೆ ಅಕ್ಷರಗಳನ್ನು ತೋರಿಸುವುದು ಆವರಿಗೆ ಬಹಳ ಸುಲಭವಾಗಿರುತ್ತದೆ. ಈ ಎರಡರೇ ಮಾರ್ಗವು ಬಹುಪೀಳ್ಯವಾಗಿ ಸಿದ್ಧಿಸುವುದು. ಇದನ್ನು ಪ್ರತಿಯೊಬ್ಬರೂ ಅಭ್ಯಾಸಿಸಬಹುದು. ಈ ಮಾರ್ಗವು ಸಿದ್ಧಿಸಿದುದೇ ಆದರೆ ನಮ್ಮ ಹಸ್ತವು ಕೆಲವುಕಾಲ ನಮ್ಮ ಸ್ವಾಧೀನವಿಲ್ಲದೆ ತನ್ನಷ್ಟಕ್ಕೆ ತಾನೆ ಸ್ವೇಚ್ಛೆಯಾಗಿ, ಅದಕ್ಕೆ ಬುದ್ಧಿ ಇರುವುದೋ ಎಂಬಂತೆ ಕಡ್ಡಿಯಿಂದ ಅಕ್ಷರಗಳನ್ನು ತೋರಿಸುತ್ತವೆ. ಆದು ತೋರಿಸಿದ ಅಕ್ಷರಗಳನ್ನೂ ಒತ್ತುಗಳನ್ನೂ ನಾವು ಜಾಗ್ರತೆಯಾಗಿ ಬೇರೊಂದು ಕಾಗದದ ಮೇಲೆ ಬರೆಯುತ್ತಿರಬೇಕು.

ಮೇಲೆ ಹೇಳಿರುವ ಎರಡು ಮಾರ್ಗಗಳಲ್ಲಿಯೂ ನಾವು ಯಾರೊಡನೆ ಸಂಭಾಷಿಸಬೇಕೆಂದಿರುವೆನೊ ಅವರು ಈ ಲೋಕದಲ್ಲಿ ~~ಜೀವಿಸುತ್ತಿದ್ದಾಗ~~ ಹಿಮ್ಮುಖರಹಿತಿಳಿದವರಾಗಿರಬೇಕು. ಇನ್ನು ಮುಂದೆ ವಿವರಿಸಲಾಗುವ ಮಾರ್ಗಗಳೆಲ್ಲವೂ ವಿಶೇಷತರವಾದುವು, ಆಶ್ಚರ್ಯಕರವಾದುವು. ಈ ಮಾರ್ಗಗಳನ್ನು ಅನುಸರಿಸುವಾಗ ಉಂಟಾಗುವ ಅಲೌಕೀಕ ಸಂಭವಗಳನ್ನು ಯಕ್ಷಿಯೆಂದಾಗಲಿ, ಅಥವಾ ಮಾಯಮಾಟಗಳೆಂದಾಗಲೀ ತಿಳಿಯಬಾರದು. ಮುಖ್ಯವಾಗಿ, ಸತ್ತವರು ಯಾವ ಸ್ಥಿತಿಯಲ್ಲಿರುವರೆಂಬುದನ್ನು ಮರೆಯಬಾರದು. ಅವರು ಸೂಕ್ಷ್ಮಶರೀರಗಳುಳ್ಳವರಾಗಿ ನಮ್ಮ ಕಣ್ಣಿಗೆ ಅಗೋಚರರಾಗಿರುವರೆಂಬುದನ್ನು ನೆನಪಿನಲ್ಲಿಡಬೇಕು. ಈ ವಿಶೇಷ ಮಾರ್ಗಗಳಲ್ಲಿ ಮೊದಲನೆಯುದೆಂದರೆ ಮೇಜು ಚಲನೆಯ ಮಾರ್ಗವೆನ್ನಬೇಕು. ಈ ಮಾರ್ಗದಲ್ಲಿ, ನಾಲ್ಕು ಅಥವಾ ಐದು ಜನರು ಭಾಗವಹಿಸಿದರೆ ಮೇಲು. ಈ ಮಾರ್ಗದ ಕ್ರಮವೇನೆಂದರೆ—ಸ್ವೇಚ್ಛಾಲಿಪಿಯ ಮಾರ್ಗದಲ್ಲಿದ್ದಂತೆಯೇ ಜೀವಸಂಭಾಷಣೆಗೋಸ್ಕರವಾಗಿಯೇ ಪ್ರತ್ಯೇಕವಾದ ಕೊಠಡಿಯಿರಬೇಕು. ಈ ಕೊಠಡಿಯಲ್ಲಿ ಒಂದು ಎತ್ತರವಾದ ಮೇಜವನ್ನು ಮಧ್ಯದಲ್ಲಿಟ್ಟು, ಜೀವಸಂಭಾಷಣೆಯಲ್ಲಿ ತೊಡಗಬೇಕೆಂದಿರುವವರು ಎಷ್ಟು ಮಂದಿ ಇರುವರೋ ಅಷ್ಟು ಕುರ್ಚಿಗಳನ್ನು ಮೇಜಿನ ಸುತ್ತಲೂ ಇಡಬೇಕು. ಮೇಲೆ ಹೇಳಿದಂತೆ ಈ ಮಾರ್ಗದಲ್ಲಿ ಕಡೆಯಪಕ್ಷ ಇಬ್ಬರಾದರೂ ಭಾಗವಹಿಸಬೇಕು. ಕುರ್ಚಿಗಳನ್ನು ಎದುರುಬದಲಾಗಿ ಇಡಬೇಕು. ಈ ಮಾರ್ಗದಲ್ಲಿ ಉಪಯೋಗಿಸುವ ಮೇಜು ಸಾಧಾರಣವಾಗಿ, ಕಚೇರಿಗಳಲ್ಲಿ ಉಪಯೋಗಿಸುವಂಥ ದೊಡ್ಡ ಮೇಜವಾಗಿರಕೂಡದು. ಬಹು ಸಣ್ಣವಾಗಿ ಸುಲಭವಾಗಿ ಎಲ್ಲಾ ಕಡೆಗಳಿಗೂ ತಿರುಗಿಸುವಂತಿರಬೇಕು. ಬೇಕಾದರೆ ಒಂದು ಸಣ್ಣ ಸ್ಟೂಲನ್ನು ಉಪಯೋಗಿಸಬಹುದು. ಜೀವಸಂಭಾಷಣೆ ಮಾಡುವವರೆಲ್ಲರೂ ಈ ಸಣ್ಣ ಮೇಜಿನ ಸುತ್ತಲೂ ಕುಳಿತುಕೊಂಡು, ಕೈಗಳನ್ನು ಈ ರೀತಿ ಜೋಡಿಸಬೇಕು. ಹೇಗೆಂದರೆ—ಒಬ್ಬನ ಬಲಗೈಯನ್ನು, ಆತನ ಬಲಪಕ್ಕದಲ್ಲಿರುವವನ್ನು ತನ್ನ ಎಡಗೈಯಿಂದ ಹಿಡಿಯಬೇಕು, ಎಡಪಕ್ಕದಲ್ಲಿರುವನನ್ನು ತನ್ನ ಬಲಗೈಯಿಂದ ಹಿಡಿಯಬೇಕು. ಹಸ್ತಗಳೆಲ್ಲವನ್ನೂ ಮೇಜಿನ ಮೇಲಿರಿಸಿರಬೇಕು. ಈ ರೀತಿಯಲ್ಲಿ ಒಂದು ಸರಪಣಿಯೋಪಾದಿಯಲ್ಲಿ ಕೈಗಳನ್ನು ಜೋಡಿಸಬೇಕು. ಹೀಗೆ ಕೈಗಳನ್ನು ಜೋಡಿಸಿ, ಸ್ವಲ್ಪ ಹೊತ್ತು ದೇವರ ಪ್ರಾರ್ಥನೆಯನ್ನು ಮಾಡಿ, ತದನಂತರ ಸತ್ತವರನ್ನು ಮನಸ್ಸಿನಲ್ಲಿ ಕೂಗಿ ಕರೆಯಬೇಕು. ಹೀಗೆ ಮಾಡಿದರೆ, ಸ್ವಲ್ಪ ಹೊತ್ತಾದ ಮೇಲೆ, ಮಧ್ಯವಿರುವ ಮೇಜು ಎಡಕ್ಕೂ ಬಲಕ್ಕೂ ತೂಗುವುದು. ತನ್ನ ಕಾಲಿನ ಮೇಲೆ ಆ ಕಡೆಗೂ ಈ ಕಡೆಗೂ ಬಾಗುವುದು. ಹೀಗಾದರೆ ನಾವು ಕರೆದಿರುವ ಸತ್ತವರು ಕೊಠಡಿಯೊಳಗಿರುವರೆಂದು ತಿಳಿಯಬೇಕು. ಅವರಿರುವುದಕ್ಕೆ ಇದೊಂದು ಸೂಚನೆಯಾಗಿದೆ. ಹೀಗೆ ಮೇಜ ಚಲಿಸುತ್ತಲೆ, ಮನಸ್ಸಿನಲ್ಲಿ ಒಂದು ರೀತಿಯಾದ ಸಂಜ್ಞೆಯನ್ನು ಸ್ಥಿರಪರಿಸಬೇಕು. ಅದೇನೆಂದರೆ, ಮೇಜ ಈ ಕಡೆಗೆ ಬಾಗಿದರೆ ಹೌದು ಎಂದರ್ಥವೆಂದೂ, ಆ ಕಡೆಗೆ ಬಾಗಿದರೆ ಅಲ್ಲವೆಂದೂ ಅರ್ಥವೆಂದು ನಿರ್ಧರಿಸಿ ಮನಸ್ಸಿನಲ್ಲಿ ಸತ್ತವರಿಗೆ ಇದನ್ನು ಸ್ಪಷ್ಟವಾಗಿ ತಿಳಿಸಬೇಕು. ಆಮೇಲೆ ನಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿದುದೇ ಆದರೆ. ಅದಕ್ಕೆ ಸರಿಯಾದ ಉತ್ತರಗಳನ್ನು ನಾವು, ಹೊಂದಬಹುದಾಗಿದೆ. ಆದರೆ ನಾವು ಕೇಳುವ ಪ್ರಶ್ನೆಗಳೆಲ್ಲವೂ, ಹೌದು ಅಥವಾ ಅಲ್ಲ ಎಂದು ಉತ್ತರಗಳನ್ನು ಹೊಂದುವಂತಿರಬೇಕು. ಏತಕ್ಕೆಂದರೆ, ಈ ಮಾರ್ಗದಲ್ಲಿ ಈ ಎರಡು ಉತ್ತರಗಳೇ ಸಾಧ್ಯವು. ಈ ಮಾರ್ಗವು ಸರ್ವರಿಗೂ ಅನ್ವಯಿಸುತ್ತದೆ. ಈ ಮಾರ್ಗದಲ್ಲಿ ಸತ್ತಿರುವವರು ಓದುಬರಹ ತಿಳಿದವರಲ್ಲದಿದ್ದರೂ ಚಿಂತೆಯಿಲ್ಲ. ನಮ್ಮನೆ ಮೇಜವನ್ನು ಆ ಕಡೆಗೂ ಈ ಕಡೆಗೂ ಬಾಗಿಸುವುದರಿಂದ ಅವರು ತಮ್ಮ ಉತ್ತರವನ್ನು ಸೂಚಿಸುತ್ತಾರೆ. ಈ ಮಾರ್ಗದಲ್ಲಿ ಹಸ್ತಗಳು ಮೇಜಿನ ಮೇಲೆ ಹಾಸಿದಂತೆ ಊರಿರಬೇಕು. ಭಾರವನ್ನು ಕೈಗಳ ಮೇಲೆ ಬಿಡದೆ ಹಗುರವಾಗಿಟ್ಟಿರಬೇಕು. ಬೇರೆಯ ಮಾರ್ಗಗಳಂತೆ ಈ ಮಾರ್ಗವನ್ನೂ ಸಾಯಂಕಾಲ ಶೀತಲೆಯಾಗಿರುವ ಸಮಯದಲ್ಲಿ ಅಭ್ಯಾಸಿಸಬೇಕು. ಇದಕ್ಕೂ ಕೆಲವು ಕಾಲ ಅಭ್ಯಾಸಬೇಕು.

[ಮುಂದುವರಿಯುವುದು.

೧೯೩೬ ರಿಂದ ಇಲ್ಲಿಯವರಿಗೆ ಟೆರೊಂಜೀನಿನ ಮ್ಯಾಥ್ಯೂಕೆನ್ನಿ ಎಂಬಾಕೆಯು ೧೦ ಮಕ್ಕಳನ್ನು ಹೆತ್ತಿರುವಳು. ಹೆಚ್ಚು ಮಕ್ಕಳನ್ನು ೧೮ ವರ್ಷದೊಳಗೆ ಹೆರುವ ತಾಯಿಗೆ ಕೊಡಬೇಕೆಂದು ಕನಡಾ ಲಾಯರೊಬ್ಬರು ಬಿಟ್ಟಿರುವ ೧,೦೦,೦೦೦ ಪೌಂ ದೊರಕಬಹುದೆಂದು ನಿರೀಕ್ಷಿಸಲಾಗಿದೆ

ಚಿತ್ರಕಲೆಯಲ್ಲಿ ತುಂಬಾ ನೈಪುಣ್ಯವನ್ನು ಪಡೆದ ಲಾಹೋರಿನ ಮಹಿಳೆ ಮಿಸ್ ಓಲ್ಡ್‌ಫೀಲ್ಡ್ ಎಂಬ ಯುವತಿಯು ಆರ್ಯಧರ್ಮವನ್ನು ಸ್ವೀಕರಿಸಿದಳು. ಆವಳ ಹಿಂದೂ ಹೆಸರು ಶ್ರೀಮತಿ ಇಂದುಮತಿ ದೇವಿ.

ವಿವಿಧ ವಿಷಯಗಳು

ವರಶುಲ್ಕವನ್ನು ತೆಗೆದುಕೊಳ್ಳುವದು ನ್ಯಾಯವಲವೆಂದು ಅನೇಕ ಪ್ರಮುಖರು ಭಾಷಿಸಿರುವರಾದರೂ ಅದನ್ನು ತೆಗೆದುಕೊಂಡವರ ಮನೆಯಲ್ಲಿ ನಡೆಯುವ ವಿವಾಹ ಸಮಾರಂಭಗಳನ್ನು ಬಹಿಷ್ಕರಿಸಿದಲ್ಲಿ ಈ ದುರಾಚಾರವು ಕೊನೆಗಾಣ ಬಹುದೆಂದು ಅನೇಕರು ಭಾವಿಸುವರು. ವರಶುಲ್ಕ ಕನ್ಯಾಶುಲ್ಕಗಳು ಎರಡೂ ದುರಾಚಾರಗಳೆಂದೂ, ಯಾವ ಬಗೆಯ ಶುಲ್ಕವನ್ನಾದರೂ ತೆಗೆದುಕೊಳ್ಳುವ ರ ವಿವಾಹಗಳನ್ನು ಬಹಿಷ್ಕರಿಸುವದು ಅಗತ್ಯವೆಂದೂ ಕೇವಲರ ಅಭಿಪ್ರಾಯ. ಶಾಸ್ತ್ರಸಮ್ಮತವಲ್ಲದ ಈ ದುರಾಚಾರಗಳನ್ನು ಎಷ್ಟು ಬೇಗ ಜನರು ಸಿಲ್ಲಿಸಲು ಯತ್ನಿಸಿದರೆ ದೇಶಕ್ಕೆ ಅಷ್ಟು ಕ್ಷೇಮವಾಗುವುದು.

ಹಿಂದೂಗಳಲ್ಲಿ ಆಯಾ ಶಾಖೆಗಳವರು ಮತ್ತೊಂದು ಶಾಖೆಯಲ್ಲಿ ವಿವಾಹ ಮಾಡಿಕೊಳ್ಳುವದರಲ್ಲಿ ತಪ್ಪಿಲ್ಲವೆಂದು ಪಾಟ್ನಾ ಹೈಕೋರ್ಟಿನವರು ತೀರ್ಮಾನ ಮಾಡಿದ್ದು ಸಂಘಸಂಸ್ಥರಿಗೆ ತೃಪ್ತಿಯನ್ನುಂಟು ಮಾಡಿದೆ. ಬ್ರಾಹ್ಮಣರಲ್ಲಿ ಎಷ್ಟೋ ಶಾಖೆಗಳಿವೆ. ಅಂತಹ ಶಾಖೆಗಳವರಲ್ಲಿ ಪರಸ್ಪರ ವಿವಾಹವಾಗುತ್ತಾ ಬಂದಲ್ಲಿ ವರಶುಲ್ಕ, ಕನ್ಯಾಶುಲ್ಕಗಳ ಪಾಪವಳಿಯು ಸ್ವಲ್ಪಮಟ್ಟಿಗೆ ಕಡಮೆಯಾಗಬಹುದು.

ಸೊಳ್ಳೆಗಳ ಯಜ್ಞಕ್ಕೆ ಹೊಸದೊಂದು ಯಂತ್ರವನ್ನು ಕಲ್ಕತ್ತಾದಲ್ಲಿ ಮೊನಾಸ್ಕೆ ಎಂಬ ಶಾಸ್ತ್ರಜ್ಞರೊಬ್ಬರು ಕಂಡುಹಿಡಿದಿರುವರು. ಆ ಯಂತ್ರವನ್ನು ಕತ್ತಲೆಯಲ್ಲಿ ಉಪಯೋಗಿಸಬೇಕು. ಬೆಳಿಗ್ಗೆ ಆ ಯಂತ್ರದ ಸೊಳ್ಳೆಗಳು ಆ ಯಂತ್ರವನ್ನು ಸವಿಯಿಸಿ ಸತ್ತುಹೋಗುವವು. ಮಲೇರಿಯಾದಿಂದ ಬಾಧೆಪಡುತ್ತಿರುವ ವಂಗದೇಶಕ್ಕೆ ಈ ಯಂತ್ರಗಳು ಬಹಳ ಅನುಕೂಲವೆಂದು ಭಾವಿಸಿರುವರು.

ಪಾಶ್ಚಾತ್ಯ ಮಹಮದೀಯ ರಾಜ್ಯಗಳಾದ ಅಲೇಪಿಯಾ, ಟ್ರಾನ್ಸ್‌ಜಾರ್ಡೇನಿಯಾ, ಪರ್ಷಿಯಾ, ಅಫಘಾನಿಸ್ಥಾನ, ಇವು ಕಲೆತು ಒಂದು ಫೆಡರೇಷನ್ನಾಗಿ ಏರ್ಪಡಬೇಕೆಂದು ಅಲೇಪಿಯಾ ರಾಜನಾದ ಇಬ್ನ್ ಸಾದ್‌ರವರ ಸೂಚನೆಯನ್ನು ಲೀಫ್ಟ್ ಸಂಸ್ಥೆಯವರು ಅಂಗೀಕರಿಸಿರುವುದೆಂದು ತಿಳಿಯಬಂದಿದೆ. ಆದರೆ ಈ ವಿಷಯದಲ್ಲಿ ಯಾವ್ಯಕರಾರೂ ಇದುವರಿಗೂ ನಡೆದಿಲ್ಲ.

ಪೋಸ್ಟ್ ಕಾರ್ಡುಗಳ ಮೇಲೆ ಭಾರತದೇಶದ ರಮಣೀಯ ದೃಶ್ಯಗಳನ್ನು ಮುದ್ರಿಸಿ ಸಮೀಪವಾಗಿ ಬೆಲೆಗೆ ವಿಕ್ರಯ ಮಾಡಲು ನಿಶ್ಚಯಿಸಿರುವರು. ಪೋಸ್ಟು ಇಲಾಖೆಯವರು. ಪಶ್ಚಿಮೋತ್ತರ ರೈಲ್ವೆ ಸಂಘದವರು ಈ ಕೆಲಸದಲ್ಲಿ ಇವರಿಗೆ ಸಹಾಯ ಮಾಡಿರುವರು. ಇಂತಹ ಕೆಲಸವನ್ನು ಇಂಗ್ಲೆಂಡಿನಲ್ಲಿ ಕೂಡ ಇದುವರಿಗೂ ಮಾಡಿಯೇ ಇಲ್ಲ.

ಈಕ್ಟ್ ಮಹಾಶಯರ ವಿಶ್ವವಿಖ್ಯಾತ ಶಾಸ್ತ್ರಜ್ಞರು. ಇವರು ಯಹೂದ್ಯಮತೀಯರು. ಜರ್ಮನಿಯಲ್ಲಿ ಯಹೂದ್ಯರಿಗೆ ಬಹಳ ತೊಂದರೆಯಾದುದರಿಂದ ಅನೇಕ ಯಹೂದ್ಯರು ಅಲ್ಲಿಂದ ಹೊರಟು ಹೋಗಬೇಕಾಯಿತು. ಅಂತವರಲ್ಲಿ ಈಕ್ಟ್‌ಸ್ಟೆನ್ ಮಹಾಶಯರೊಬ್ಬರು. ಇವರನ್ನು ಪ್ರಪಂಚದಲ್ಲಿಯ ಎಲ್ಲಾ ದೇಶದವರೂ ಬರುವಂತೆ ಹೇಳಿದರು. ಈಗ ಇವರು ಅಮೇರಿಕದಲ್ಲಿಯ ಪ್ರಿನ್‌ಸ್ಟನ್ ವಿಶ್ವವಿದ್ಯಾಲಯದಲ್ಲಿರುತ್ತಾರೆ. ಅಮೇರಿಕದವರ ಆಹ್ವಾನವನ್ನು ಸರಿಸಿ ಇವರು ಅಮೇರಿಕಾ ದೇಶೀಯರಾಗಿರಲು ನಿಶ್ಚಯಿಸಿರುವರು.

ಬೆನಾರಿಸಿನ ಟವರ್‌ಹಾಲ್ ವೈದಾನದಲ್ಲಿ ಲೀಲಾಭರಣರ್ಮ ಎಂಬ ಯುವಕನು ೯೦ ಗುಟಿಯ ವರೆಗೆ ಬಂದೇ ಸಮನಾಗಿ ನಡೆವ ಪ್ರಪಂಚದ ರಿಕಾರ್ಡ್‌ನ್ನು ಮಾಡಿದ್ದಾನೆ. ನಡಗೆಯು ಪ್ರಾರಂಭವು ಒಂದು ಭಾನುವಾರ ಬೆಳಗ್ಗೆ ಪುಂತಿ ಸುಪೂರ್ಣವಾಗಿ ನಂದುವರಿಗಾಗಿ ನಾಗುಂಡ ಮಂಡಲದ ಶಿಷ್ಯಕ್ಷೇತ್ರದ ಶ್ರೀ ಪರಮಾರಕರರ ಎದುರಿನಲ್ಲಿ ಬಾಧವಾರ ರಾತ್ರಿ ನಿಂತಿತು. ಗುರುವಾರ ಮಧ್ಯಾಹ್ನ ಲೀಲಾಧರನ ಉತ್ಸವವು ಸಾವಿರಾರು ಜನರಿಂದೊಡಗೂಡಿ ಬೆನಾರಿಸಿನ ನಾನ್ನಾ ರಾಜಮಾರ್ಗಗಳಲ್ಲಿ ನಡೆಯಿತು.

ಪೊಕ್ಕೂರು ಎಂಬದೊಂದು ಹಳ್ಳಿಯಲ್ಲಿ ಒಬ್ಬ ಹೆಂಗಸು ತನ್ನ ೨ ವರ್ಷದ ಮಗುವನ್ನು ಹಾಸಿಗೆಯಲ್ಲಿ ಬಿಟ್ಟು ಕೆಲಸದ ನಿಮಿತ್ತ ಹೊರಗೆ ಹೋಗಿದ್ದಳು. ೧೫ ನಿಮಿಷದ ಅನಂತರ ಒಂದು ಸರ್ಪವು ಮಗುವಿನ ಮೇಲೆ ತನ್ನ ಹೆಡೆಯನ್ನು ಇರಿಸಿ ವಡಚಿ ಕೂತಿದ್ದು. ದನ್ನು ಕಂಡು ಭಯಚಕಿತಳಾಗಿ ಕೂಗಿಕೊಂಡಳು ಅವಳ ಗಂಡ ಮತ್ತು ನೆರೆಹೊರೆಯವರು ಓಡಿಬಂದರು. ಆದರೆ ಮಗುವಿಗೆ ಹಾನಿಯಾಗುವ ಭಯದಿಂದ ಸರ್ಪಕ್ಕೆ ಹೊಡೆಯಲಾಗಲಿಲ್ಲ. ಸರ್ಪವು ಒಂದು ಗಂಟೆಯ ವರೆಗೆ ಹಾಗೆಯೇ ಕೂತಿತ್ತು. ಮಗುವಿಗೆ ಜೀವಾಗಿ ನಿದ್ದೆಹತ್ತಿದಮೇಲೆ ಹೊರಗೆ ಹರಿದು ಹೋಯಿತು.

ಕಾಂಗ್ರೆಸ್ಸಿನವರು ಅಧಿಕಾರವನ್ನು ಸ್ವೀಕರಿಸಬಾರದೆಂಬ ಪ್ರಬಲ ಜನಮತವನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಲು ಮಾರ್ಚಿ ತಾ॥ ೮ ನೇ ಭಾನುವಾರ ದೇಶದಲ್ಲೆಲ್ಲ ಮಿಸಿಸ್ಟರ್ ವಿರುದ್ಧವಾದ ದಿನಾಚರಣೆಯನ್ನು ಆಚರಿಸಕ್ಕದೆಂದೂ, ಕಾಂಗ್ರೆಸ್ ಮುಂದಿಯ ಕಾರ್ಯದರ್ಶಿಗಳು, ಸಾರ್ವಜನಿಕ ಸಭೆಯ ಭಾಷಣಗಳೂ ಆಗಲೇ ಜರುಗತಕ್ಕದೆಂದೂ ಪಾಟ್ನಾದ ಸರ್ದಾರ್ ಸಾದೂಲ್ ಸಿಂಗ್, ವಿ॥ ಶಾಫಿ ಅಹಮ್ಮದ್ ಕಿದ್ವಾಯ್, ವಿ॥ ಮ. ಸಾನಿ ಮೊದಲಾದವು ನಿಶ್ಚಯಿಸಿರುವರು.

ಬೊಂಬಾಯಿಯ ಮೆಡಿಕಲ್ ಯೂನಿಯನ್ನಿನವರು ಜರ್ಮನ್ನಿನ ವಸ್ತುಗಳನ್ನು, ಮುಖ್ಯವಾಗಿ ಔಷಧಿಯ ಸಾಮಾನುಗಳನ್ನು ಬಹಿಷ್ಕರಿಸಬೇಕಾಗಿ ಪ್ರಜೆಗಳಿಗೆ ಪ್ರಾರ್ಥಿಸಿಕೊಂಡಿದ್ದಾರೆ. ಮೂನಿಚ್ ನಗರದಲ್ಲಿ ಹುಟ್ಟಿದವರು ಹಿಂದುಸ್ಥಾನದವರನ್ನು ನಿಂದಿಸಿ ಮಾತಾಡಿದ್ದಕ್ಕಾಗಿ ಈ ಬಹಿಷ್ಕಾರವನ್ನು ಮಾಡಿದ್ದಾರೆಂದು ತಿಳಿಯಬಂದಿದೆ.

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ.

H. SASSEN & CO.,
15 Armenian Street, Post Box 163
G. T. MADRAS

ಚಿಂತೆ ಬೇಡ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ. ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ರಾಜಕ ಜ್ಯೋತಿಷ್ಯರು,
೧೦೬ ಚಾಮರಾಜ ಅಗ್ರಹಾರ, ಮೈಸೂರು

Shanmukhavilas Coffee Club

Jaganmohan Palace Road
MYSORE
— for —
EXCELLENT TIFFIN, & COFFEE.

Wanted

Agents with Pay and Allowances
to canvass subscribers and advertisers for

SATYAVADI

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವೈಶ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ! ಹೆಚ್ಚೇಕೆ—ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ **ಶಕ್ತಿಸುಧೆ**ಯನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಶರೀರರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ಕುಂಬಾ ಪ್ರಯೋಜನಹೊಂದಿ ಪ್ರಶಂಸಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಪಾರಿತೋಷಕಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಪೂರ್ವ ವನಸ್ಪತಿಗಳಿಂದ ತಯಾರಾದುದು ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲಿ, ಕಠಿಣ ಪಥ್ಯವಾಗಲಿ ಇಲ್ಲ. ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೇಶಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿ ಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "**ಶಕ್ತಿಸುಧೆ**" ಯು ನವತೇಜಸ್ಸನ್ನೂ ಬಲಪುಷ್ಟಿ ಪುಷ್ಟಿಯನ್ನೂ ಉಂಟು ಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "**ಶಕ್ತಿಸುಧೆ**" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"**ಶಕ್ತಿಸುಧೆ**" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸೌಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನು ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "**ಶಕ್ತಿಸುಧೆ**" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "**ಶಕ್ತಿಸುಧೆ**" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅಮೃತಪಾಯವಾದ "**ಶಕ್ತಿಸುಧೆ**" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಿ. ಖ ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ—ಶಕ್ತಿಸುಧಾ ಕಾರ್ಯಾಲಯ, ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು.

ವೃತ್ತಾಂತಗಳು.

ಫಿಜೀ ಸರ್ಕಾರವು ವರ್ಷಂಪ್ರತಿ ಯೂರೋಪಿಯರ್ ವಿದ್ಯೆಗಾಗಿ ೮,೫೦೦ ಹುಡುಗರಿಗೆ ೬,೫೦೦ ಪೌಂಡುಗಳನ್ನು ವ್ಯಯಮಾಡುತ್ತ ೮೦,೦೦೦ ಭಾರತೀಯ ಹುಡುಗರ ವಿದ್ಯೆಗಾಗಿ ೨೯೫ ಪೌಂಡುಗಳನ್ನು ಖರ್ಚು ಮಾಡುತ್ತಿರುವದು.

ಅಮೇರಿಕಾ ಪತ್ರಿಕಾ ಸಂಪಾದಕರಲ್ಲಿ ಪ್ರಮುಖರಾದ ರಾಯಿಸೋವಡ ರವರು ಇಂಡಿಯಾದಲ್ಲಿ ವರ್ಣವ್ಯವಸ್ಥೆಯನ್ನು ಪಾಲಿಸುವವರಿಗೂ ಭಾರತೀಯರ ರಾಜಕೀಯ ಕೃಷಿಗಾಗಲಿ, ಜಾತಿ ಯೋದ್ಯಮಕ್ಕಾಗಲಿ ಅಮೇರಿಕವು ಸಹಾನುಭೂತಿಯನ್ನು ತೋರಿಸಲಾರದೆಂದು ತಿಳಿಸಿರುವರು. ಅಮೆರಿಕನ್ನಿಗೆ ಸಿಗ್ರೋಜನಗಳನ್ನೂ, ರೆಡ್ ಇಂಡಿಯನ್ನರನ್ನೂ ನಿರಂತರವೂ ಬಾಧೆಗೊಳಿಸುತ್ತಿರುವ ಅಮೇರಿಕವು ಭಾರತೀಯರ ಮೇಲೆ ಸಾನುಭೂತಿಯನ್ನು ತೋರಿಸುವದು ಅಸಂಭವವು. ಎಲ್ಲಾ ದೇಶಗಳಲ್ಲಿಯೂ ಭಾರತ ದೇಶದೋಪಾದಿ ವರ್ಣವ್ಯವಸ್ಥೆಯಿಲ್ಲದಿದ್ದರೂ ಬೇರೊಂದುಬಗೆಯಲ್ಲಿ ಭೇದಗಳಿರುವಿಕೆಯನ್ನು ಅವರು ತಿಳಿದುಕೊಳ್ಳದೆ ಹೋದರು.

ಸಂಯುಕ್ತ ಪ್ರಾಂತ್ಯದ ಆರ್ಯಪ್ರತಿನಿಧಿಸಭೆಯವರ ಆಶ್ರಯದಲ್ಲಿ, ಬೃಂದಾವನದ ಗುರುಕುಲ ವಿಶ್ವವಿದ್ಯಾಲಯದ ೭ ಮಂದಿ ಪಂಡಿತರು, ವೇದವನ್ನು ಹಿಂದೀ ಭಾಷೆಗೆ ಪರಿವರ್ತಿಸಲು ಕ್ಷಿಪ್ರದಲ್ಲೇ ಪ್ರಾರಂಭಿಸುವರು. ಈ ಅಪೇಕ್ಷಿತ ಕಾರ್ಯಕ್ಕೆ ಅನೇಕರಿಂದ ಹಣಸಹಾಯ ದೊರೆಯುತ್ತಿರುವದು ಮತ್ತು ಮಥುರಾದ ಸಾಹುಕಾರ್ ಶಿವಜೀದಜೀಯವರು ೧೫ ಸಾವಿರ ರೂಪಾಯಿಗಳನ್ನು ದಯಪಾಲಿಸಿರುವರು! ಈ ಪರಿವರ್ತನವನ್ನು ಬೈಬಲಿನಂತೆ ಅಗ್ಗವಾಗಿ ಸಭೆಯವರು ಪ್ರಕಟಿಸಿವರು ಇದರಿಂದ ಪ್ರತಿಯೊಬ್ಬರೂ ಸಂಗ್ರಹಿಸಲು ಸುಲಭಸಾಧ್ಯವಾಗುವುದು.

ನಾಲ್ಕು ವರ್ಷಗಳಿಂದಲೂ ಕವುಥಾಲಾ ಸಂಸ್ಥಾನದ ಆಡಳಿತ ವರದಿಯು ಪ್ರಕಟವಾಗಿರುವುದಿಲ್ಲವಂತೆ! ಅಲ್ಲದೆ ಸಂಸ್ಥಾನದ ಸಭೆಯೂ ನಡೆದಿಲ್ಲವಂತೆ!! ಆರ್ಥಿಕ ಪರಿಸ್ಥಿತಿಯು ಸರಿಯಿಲ್ಲವೆಂದು ಅನೇಕ ಹಳ್ಳಿ ಸ್ಕೂಲುಗಳ ಬಾಗಿಲುಗಳನ್ನು ಮುಚ್ಚಲ್ಪಟ್ಟಿವೆಯಂತೆ !!!

ಮೇಯೋ ಮಾತೆಯ ನವನಾಗರೀಕತೆಯು ಉಚ್ಚ ಶಿಖರವೇರಿರುವದೆಂಬ ಅಮೇರಿಕಾದಿಂದ ಒಂದು ರವ ಹೃದಯಚ್ಛೇದಕ ವರ್ತಮಾನ—ಪ್ರತಿವರ್ಷವೂ ನ್ಯೂಯಾರ್ಕ್ ನಗರದಲ್ಲಿ ೧,೧೮,೦೦೦ ಮಂದಿಯಂತೆ ಹೊಸ ಹೊಸದಾಗಿ ಫರಾಗೀ ರೋಗಕ್ಕೆ ತುತ್ತಾಗುತ್ತಿದ್ದಾರಂತೆ. ಇದರಲ್ಲಿ ಹಕ್ಕನೆ ಒಂದು ಭಾಗ ವೈದ್ಯರ ಅವಗಾಹನೆಗೆ ಒರವುದಂತೆ ವಿಕ್ಕವರಿಂದ ಈ ವ್ಯಾಧಿಯು ವತ್ತಿಷ್ಟು ಘೋರವಾಗಿ ಹರಡುವುದು.

ಸಿಕಂದರಾಬಾದಿನಿಂದ ಬರೆದಿರುವ ಒಂದು ವಿಚಿತ್ರ ಹ್ರಿಜ್ಞೋದ್ಧಾರ ಕಾರ್ಯವನ್ನು ನೋಡಿ! ಅಲ್ಲಿಯ ಸಂಘಸಂಸ್ಥೆಕರಾದ ಮಾ|| ಬಾಜೀ ಕೃಷ್ಣರಾಯರ ಮನೆಯಲ್ಲಿ ಶಾದ್ಧ ನಡೆಯಬೇಕಾಯಿತು. ಆಗ ಬ್ರಾಹ್ಮಣರಿಗೆ ಬ್ರಾಹ್ಮಣರನ್ನು ಕರೆಯುವುದರ ಬದಲು ಇಬ್ಬರು ಹರಿಜನ ಹುಡುಗಿಗಳನ್ನು ಕರೆದು, ಒಟ್ಟಿಗೆ ಕೂಟ್ಟು ಊಟಮಾಡಿಸಿ, ಬ್ರಾಹ್ಮಣಾರ್ಥವನ್ನು ನಡೆಸಿ, ಕೃತಾರ್ಥರಾದರು. "ಹರಿಜನ ಮಾತಾ" ಎಂದು ಪ್ರಸಿದ್ಧಗೊಂಡಿರುವ ಇವರ ಪತ್ನಿಯೂ ಇದರಲ್ಲಿ ನಿರ್ಲೋಭಕವಾಗಿ ಭಾಗವಹಿಸಿದ್ದರೆಂದು ತಿಳಿಯಬಂದಿದೆ.

ಪಂಜಾಬಿನ ಸರ್ಕಾರೀ ಕೈಗಾರಿಕೆಯ ಶಾಲೆಯಲ್ಲಿ ಇನ್ನು ಮುಂದೆ ಗ್ರಾಮಾಫೋನು, ಗಡಿಯಾರ ಹೊಲಿಗೆಯಂತ್ರ, ಬೈಸಿಕಲ್ ಮುಂತಾದವುಗಳ ತಯಾರ್ಮಾಡಲ್ಪಟ್ಟು, ವಿಪರೀತ ಕಡಮೆ ಖರೀದಿಗೆ ಮಾರಲ್ಪಡಲು ಪ್ರಯತ್ನ ನಡೆಸುತ್ತಿರುವರೆಂದೂ, ಒಂದು ಹೊಲಿಗೆ ಯಂತ್ರಕ್ಕೆ ೨೦ ರೂಪಾಯಿ ಮಾತ್ರ ಬೆಲೆಯಾಗುವುದೆಂದೂ ತಿಳಿಯಬಂದಿದೆ.

ಬಂಗಾಳಾದ ಮಾರಾಬಂಗಾ ಹಳ್ಳಿಯಲ್ಲಿ ಬಂದು ಅನೆಯು ತನ್ನ ಮಾವಟಿಗನನ್ನು ಕೊಂದು, ಆ ಶವದ ಮುಕ್ಕಾಲು ಭಾಗವನ್ನೆಲ್ಲಾ ತಿಂದುಬಿಟ್ಟಿತೆಂದೂ, ವರ್ತಮಾನಬಂದಿದೆ. ಅನೆಯನ್ನು ಬಹಳ ಕಷ್ಟಪಟ್ಟು ಹಿಡಿದು ಭದ್ರವಾಗಿ ಕಟ್ಟಿಹಾಕಿರುತ್ತಾರೆ.

ತಂಗೇಲ್ ಡಿಸ್ಟ್ರಿಕ್ಟಿನ ಖಿಲ್‌ಗಾಲೀಯಲ್ಲಿನ ಒಬ್ಬ ಮಹಮ್ಮದೀಯನ ಪತ್ನಿಯು ಒಂದೇಸಾರಿ ೪ ಮಕ್ಕಳನ್ನು ಹೆತ್ತಿರುವಳು; ಆ ಪೈಕಿ ೧ ಹೆಣ್ಣು, ೩ ಗಂಡು ಮಕ್ಕಳು. ಹೆಣ್ಣು ಮಗುವು ಕೂಡಲೇ ಸತ್ತುಹೋಯಿತೆಂದೂ, ೩ ಕಂಡು ಮಕ್ಕಳು ಬದುಕಿರುವವೆಂದು ವರ್ತಮಾನ ಪ್ರಕಟವಾಗಿದೆ.

ಐರ್ಲಿಂಡು ಪಾರ್ಲಿಮೆಂಟಿನಲ್ಲಿ ಡಿವಿಲರಾವರ ಅಧ್ಯಕ್ಷತೆಯಲ್ಲಿ, ಜಾರ್ಜ್ ಚಕ್ರವರ್ತಿಯವರ ಮರಣಕ್ಕಾಗಿ ಸಹಾನುಭೂತಿ ತೀರ್ಮಾನವನ್ನು ಮಂಜೂರ್ಮಾಡಿಸಿ, ಹೊಸ ಚಕ್ರವರ್ತಿಯವರಿಗೂ ಅವರ ಕುಟುಂಬದವರಿಗೂ ಪ್ರಾಮ್ತವಾದ ನಷ್ಟಕ್ಕೆ ಪಾರ್ಲಿಮೆಂಟು ಸಭಾಸದರು ತಮ್ಮ ವ್ಯಸನವನ್ನು ವ್ಯಕ್ತಪಡಿಸಿದರು. ಇಂಗ್ಲೆಂಡಿನಲ್ಲಿ ಅನೇಕರು ಐರ್ಲಿಂಡಿನಲ್ಲಿ ಇಂತಹ ತೀರ್ಮಾನವು ಮಾಡಲ್ಪಡುವುದೆಂದು ಊಹಿಸಿರಲಿಲ್ಲ.

ಜುಗೋಸ್ಲೋವಿಯಾದಲ್ಲಿನ ಜನ ಸಂಖ್ಯೆಯು ೧೫,೦೦೦,೦೦೦; ಈ ಪೈಕಿ ೪ ಸಾವಿರಕ್ಕೆ ಮೇಲ್ಪಟ್ಟು ೧೦೦ ವರ್ಷಕ್ಕಿಂತ ಹೆಚ್ಚಿದ ವಯಸ್ಸಿನವರಿರುವರಂತೆ. ಇವರೆಲ್ಲರೂ ಆರೋಗ್ಯವಾಗಿದ್ದು ತಮ್ಮ ದಿನಚರಿ ಕೆಲಸಗಳನ್ನು ಸರಿಯಾಗಿ ಮಾಡುತ್ತಿರುವರಂತೆ.

ಹೊಸ ಚಕ್ರವರ್ತಿಗಳಾದ ಎಡ್ವರ್ಡರವರ ಪಟ್ಟಾಭಿಷೇಕದ ಕಾಲದಲ್ಲಿ ಹೊಸ ನಾಣ್ಯಗಳ ಚಲಾವಣೆಯನ್ನು ಮಾಡುವರಾದುದರಿಂದ ಅವುಗಳ ಮೇಲೆ ದೇವನ ಗರಿ ಅಕ್ಷರಗಳನ್ನು ಮುದ್ರಿಸುವದು ಅನಿವಾರ್ಯಕವೆಂದು "ಲೀಡರ್" ಪತ್ರಿಕೆಯು ಅಭಿಪ್ರಾಯ ಪಟ್ಟಿದೆ. ಇಂಡಿಯಾದಲ್ಲಿ ಅನೇಕರು ನಾಗರೀ ಅಕ್ಷರಗಳನ್ನು ಓದಬಲ್ಲವರಾಗಿರುವುದರಿಂದ ಹೀಗೆ ಮಾಡುವುದು ಒಂದ ಬಗೆಯಲ್ಲಿ ಒಳ್ಳೆಯದೆಂದೇ ಹೇಳಬಹುದು.

ಮಲ್ಬಾರಿನಲ್ಲಿಯ ಬಾಲಿಕಾ ಪಾಠಶಾಲೆಗಳಲ್ಲಿಯ ಬಾಲಕಿಯರ ಪರೀಕ್ಷೆಯಲ್ಲಿ ಶ್ರೀಮತಿ ಮಾಧವಿ ಎಂಬ ಹರಿಜನ ಬಾಲಕಿಯು ಅಗ್ರಸ್ಥಾನವನ್ನು ವಹಿಸಿದ್ದರಿಂದ ಅಕೆಗೆ ಸ್ವರ್ಣಪದಕವನ್ನು ವಿಶೇಷವಾಗಿ ಕೊಟ್ಟಿರುವರು.

ದೆಹಲಿ ಅಸೆಂಬ್ಲಿಯಲ್ಲಿ ಶ್ರೀ ಸೂರ್ಯಕುಮಾರ ಸೋಂಧರವರು ಹೆಂಡತಿ ಸತ್ತಿರುವವರು ಎಂಬಂಶಗಳನ್ನು ಮದುವೆ ಮಾಡಿಕೊಳ್ಳಬೇಕೆಂಬ ಒಂದು ಸೂಚನೆಯನ್ನು ಪ್ರತಿಪಾದಿಸಿದರು.

ಜಪಾನಿನ ಡಾಕ್ಟರೊಬ್ಬರು ಕಣ್ಣುಗುಡ್ಡೆಯ ಬಣ್ಣವನ್ನು ಒದಲಾಯಿಸುತ್ತಿರುವರು. ಇವರ ಚಾತುರ್ಯವನ್ನು ಎಲ್ಲರೂ ಕೊಂಡಾಡುತ್ತಿರುವರು

ಚೈನಾದೊಳಗೆ ಅಮೇರಿಕವನ್ನು ಪ್ರವೇಶಪಡಿಸದಂತೆ ಮಾಡಲು ಜಪಾನು ಪ್ರಯತ್ನಿಸುತ್ತಿರುವದರಿಂದ ಅಲ್ಲಿಯೂ ಕೂಡ ಒಂದು ಮಹಾಯುದ್ಧವಾಗಬಹುದೆಂದು ಅನೇಕರು ಊಹಿಸುತ್ತಿರುವರು.

ಮಜಲೀಪಟ್ಟಣದಲ್ಲಿ, ರಾತ್ರಿ ೧೦ ಘಂಟೆಗಳ ತರುವಾಯ ಬೆಳಗಿನ ಝಾವ ೫ ಘಂಟೆಗಳೊಳಗೆ ಯಾರೂ ವೇಳೆತಪ್ಪಿಗಳೊಡನೆ ವೆರವಣಿಗೆಗಳನ್ನು ಮಾಡಕೂಡದೆಂದು ಅಲ್ಲಿಯ ಮ್ಯಾಜಿಸ್ಟ್ರೇಟರು ಪ್ರಕಟನೆಯನ್ನು ಹೊರಡಿಸಿರುವರು. ಇತರ ಪಟ್ಟಣಗಳಲ್ಲಿಯೂ ಜನರಿಗೆ ನಿದ್ರಾಭಂಗವಾಗದಂತೆ ಹೀಗೆ ಮಾಡುವದು ಯೋಗ್ಯವಾಗಿದೆ

ಪ್ರಜೆಗಳ ಸ್ವಾತಂತ್ರ್ಯಕ್ಕೆ ವಿರೋಧವಿಲ್ಲದೆ ಅವರನ್ನು ಸಂರಕ್ಷಿಸುವುದೇ ತಕ್ಕ ವಿಧಿಯೆಂದು ನವೀನ ಚಕ್ರವರ್ತಿ ಎಡ್ವರ್ಡರವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು. ಇದು ಎಲ್ಲರಿಗೂ ತೃಪ್ತಿಯಿನ್ನುಂಟುಮಾಡಿರುತ್ತದೆ.

ಮುಂಬೈಯಲ್ಲಿ ತಾತಾ ಕಂಪೆನಿಯವರೂ ಬಂಗಾಳಾದ ಕಂಪೆನಿಯವರೂ ಕಲೆತು ಕಬ್ಬಿಣದ ವ್ಯಾಪಾರವನ್ನು ಹೆಚ್ಚಿಸಲು ತೀರ್ಮಾನಿಸಿಕೊಂಡಿರುವರು. ಇವರು ಸೇರಿ ೪—೫ ಕೋಟಿ ಬಂಡವಾಳ ಹಾಕಿ ಒಂದು ದೊಡ್ಡ ಕಂಪೆನಿಯನ್ನು ಸ್ಥಾಪಿಸಲಿರುವರು.

Weekly Newspaper

SATYAVA

(Founded 1917)

Every Wednesday

MYSORE

4—3—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಜೆಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪೂರ್ಣವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫×೨೫ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರ್‌ಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ್ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಅದರ ಪ್ರಚಾರಕ್ಕಾಗಿ ಏಜೆಂಟರು ಬೇಕು.

ಸೂರಕ್ಕೆ ೧೫ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊತ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣ ನಿಡಲು ಸಮರ್ಥರಿರುವ ಜನರಲ್ಲೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪನ್ನಿಟ್ಟು ವಿಶೇಷ ಮಾಹಿತಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M.. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Shiromani NARAYANACHARYA

Chowkambha, Benarese.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರು ಆರೋಗ್ಯವೇ ನಿಜವಾದ ಆರೋಗ್ಯ- ಆದಕ್ಕೆ ಕಾರಣವೇನು ಶ್ರೀಯವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ? ಅದನ್ನು ಧರಿಸಿದರೆ, ಬೌರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭೃದ್ಧಿ, ವೈರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿಹೊಂದಿದ ಸಂಸ್ಥೆ [illegible] ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾಗ ರುದ್ರಾಕ್ಷಿಯೇ ದೊರೆಯುವುದು.

ಸಣ್ಣ ಆಕ್ಕೆ ಕ್ರಮವಾದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರೆಗೆ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರೆಗೆ. ಸಣ್ಣ ರುದ್ರಾಕ್ಷಿಗೇ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ; ದೊಡ್ಡ ರುದ್ರಾಕ್ಷಿಗೇ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು: 1 ವಿಶ್ವೇಶ್ವರ ಪತ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬೆನಾರಿಸ್ [ಕಾಶಿ]

H. S. KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy

Geueral Hospital Road

MYSORE

fOr

Best Unani Medicines.